GHSS ANGADIMOGAR

ಡಿಜಿಟಲ್ ಮ್ಯಾಗಸಿನ್ 2024

# ಚಿಗುರು







# ಮುನ್ನುಡಿ

ಜಿ.ಎಚ್.ಎಸ್ .ಎಸ್.ಅಂಗಡಿಮೊಗರು ಶಾಲೆಯ ಲಟಲ್ ಕೈಟ್ಸ್ ವಿದ್ಯಾರ್ಥಿಗಳ ನೇತೃತ್ವದಲ್ಲಿ ಬಿಡುಗಡೆ ಮಾಡುವ ಮ್ಯಾಗಸಿನ್ ಇದು.ವಿದ್ಯಾರ್ಥಿಗಳ ಕ್ರಿಯಾತ್ಮಕ ರಚನೆಯು ಹೊರಹೊಮ್ಮುವಲ್ಲಿ ಈ ಮ್ಯಾಗಸಿನ್ ಸಹಾಯಮಾಡಿದೆ. ಇದಕ್ಕಾಗಿ ಸಹಾಯ ನೀಡಿದವರೆಲ್ಲರಿಗೂ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

LITTLE KITES MEMBERS
GHSS ANGADIMOGAR

# INDEX


| SL NO | TITLE | PAGE NO. |
|---|---|---|
| 1 | ಭಾರತ | 5 |
| 2 | ಅಮ್ಮ | 6 |
| 3 | ಮುಂಜಾನೆಯ ಮೋಡಿ | 7 |
| 4 | ಸೂರ್ಯೋದಯ | 8 |
| 5 | ಆನೆಯ ಸಹಾಯ | 9 |
| 6 | ನನ್ನ ಪ್ರವಾಸದ ಅನುಭವ | 10 |
| 7 | ರಾಷ್ಟ್ರದ ಭಾವೈಕ್ಯ | 11 |
| 8 | ಮುಂಜಾವು | 12 |
| 9 | ಮಾಂತ್ರಿಕ ಮಣ್ಣಿನ ಕುಡಿಕೆ | 13 |

| | | |
|---|---|---|
| 10 | ಔಷಧೀಯ ಸಸ್ಯಗಳು | 14 |
| 11 | തെങ്ങ് | 15 |
| 12 | വീട് | 16 |
| 13 | MY BEST FRIEND | 17 |
| 14 | A Bag Of Oranges | 18 |
| 15 | സോഷ്യൽ മീഡിയ | 19 |
| 16 | ಬೆಕ್ಕು | 20 |
| | | |
| | | |
| | | |

# ಭಾರತ

ಭಾರತವು ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಿ ಒಂದಾಗಿದೆ.ಭಾರತವನ್ನು ಗೌರವಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಭಾರತವು ನನ್ನ ದೇಶ ಎಂಬ ಪ್ರತಿಜ್ಞೆಯನ್ನು ಗೌರವದಿಂದಲೂ ಹೆಮ್ಮೆಯಿಂದಲೂ ನಾವು ದಿವಾಸಲು ಹೇಳಬೇಕು. ಭಾರತವು 1947 ಆಗಸ್ಟ್ 15ರಂದು ಬ್ರಿಟಿಷರ ಆಳ್ವಿಕೆಯಿಂದ ಸ್ವತಂತ್ರವಾಗಿದೆ.

ನಮ್ಮ ಈ ಭಾರತ ಇಡೀ ವಿಶ್ವದಲ್ಲಿ ಅತ್ಯಂತ ಹೆಚ್ಚು ಜನಸಂಖ್ಯೆ ಇರುವ ದೇಶವಾಗಿದೆ. ಭಾರತದ ಕೊಡುಗೆಗಳು ಅಪಾರವಾದದ್ದು. ಭಾರತದಲ್ಲಿ ಹಲವು ಜಾತಿ ,ಮತ, ಪಂಗಡಗಳಿವೆ. ಆದರೂ ಭಾರತವು ಐಕ್ಯದಿಂದ ಇರುವ ದೇಶವಾಗಿದೆ.ಭಾರತವು ಎಲ್ಲಾ ಕ್ಷೇತ್ರಗಳಲ್ಲೂ ಅತ್ಯಂತ ಉನ್ನತ ಸಾಧನೆಗಳನ್ನು ಮಾಡಿದೆ.ಒಲಿಂಪಿಕ್, ಸ್ಪೋರ್ಟ್ಸ್,ಸಂಶೋಧನೆಮುಂತಾದವುಗಳಲ್ಲಿ ಸಾಧನೆಯನ್ನುಮಾಡಿದೆ. ಕಬಡ್ಡಿ ಪಂದ್ಯಾಟದಲ್ಲಿ ವಿಶ್ವಾದ ನಂಬರ್ ಒನ್ ಟೀಮ್ ಆಗಿ ಮಾರ್ಪಟ್ಟಿದೆ ನಮ್ಮ ದೇಶ ಭಾರತ. ಭಾರತ ಸೈನ್ಯದ ಶಕ್ತಿ ಎಂದರೆ ಅಪಾರ ವಾದದ್ದು. ಶತ್ರುಗಳು ಬಂದರು.ಹೊಡೆದುರುಲಿಸಲು ಸಾಧ್ಯವಿರುವ ಸೈನ್ಯವು ನಮ್ಮ ದೇಶವಾದ ಭಾರತದಲ್ಲಿ ಇವೆ. ಆಡಳಿತದಲ್ಲೂ ಇತರಕ್ಷೇತ್ರಗಳಲ್ಲೂ ಅತ್ಯುನ್ನತಸಾಧನೆಯನ್ನುಮಾಡಿದೆ.

# ಅಮ್ಮ

ಅಮ್ಮ ಎಂಬ
ಎರಡಕ್ಷರ ಪದ
ಹೇಳಲು ಬಹಳ ಮಧುರ
ಹೇಳಲು ಬಹಳ ಮಧುರ...

ವಜ್ರಗಳಿಗಿಂತಲೂ ಅತಿ
ಅಮೂಲ್ಯ ನನ್ನ ಅಮ್ಮ
ಅವಳೇ ನನಗೆಲ್ಲ
ಅವಳೇ ನನಗೆಲ್ಲ...



ಒಂಬತ್ತು ತಿಂಗಳು
ಎತ್ತಿ ಆಡಿಸಿದಳು
ನನ್ನ ಮುದ್ದಿನ ಅಮ್ಮ
ನನ್ನ ಮುದ್ದಿನ ಅಮ್ಮ

ಅಮ್ಮ ನನ್ನ ಅಮ್ಮ
ನೀನೇ ನನಗೆಲ್ಲ
ನಿನ್ನ ಪ್ರೀತಿ ಮಧುರ
ನಿನ್ನ ಪ್ರೀತಿ ಮಧುರ...

ಅಮ್ಮ ಎಂಬ
ಎರಡಕ್ಷರ ಪದ
ಹೇಳಲು ಬಹಳ ಮಧುರ
ಹೇಳಲು ಬಹಳ ಮಧುರ

# ಮುಂಜಾನೆಯ ಮೋಡಿ

ನೀಲಾಕಾಶದಲಿ ನಗುನಗುತ್ತುದಯಿಸುವನು
ಮರಗಳೆಡೆಯಲ್ಲಿ ಅಡಗಿರುವನು
ಪ್ರಕೃತಿಯ ಕೀರ್ತಿ ನೇಸರನು
ಮಾನವನ ದುಃಖ ಸುಖಗಳನು
ತನ್ನುದಯದಲ್ಲಿ ತೋರಿಸುವನು
ಗಗನದ ತಾರೆ ಸೂರ್ಯನು
ಗಿಡ ಮರಗಳಲ್ಲಿರವ ಹನಿಗಳಲ್ಲಿ
ಆರತಿಯ ಬೆಳಗಿಸುವನು
ಬೆಳಗಿನ ನಾಯಕನು ದಿನಕರನು
ಪ್ರಾಣಿ ಪಕ್ಷಿಗಳನು ಆನಂದದಲಿ
ತೇಲಾಡಿಸಿ ಉದಯವ ನೀಡುವನು
ನಮ್ಮಿ ಚೆಲುವಿನ ರವಿಯು



# ಸೂರ್ಯೋದಯ



ಮುಂಜಾನೆಯ ಹೊತ್ತಿನಲ್ಲಿ
ಆ ಬೆಟ್ಟಗಳ ನಡುವಿನಲ್ಲಿ
ಉದಯಿಸುತ್ತಿರುವನು ಆ ಸೂರ್ಯ
ಉದಯಿಸುತ್ತಿರುವನು ಆ ಸೂರ್ಯ
ಈ ನಮ್ಮ ಪ್ರಕೃತಿಯನ್ನು
ಕಾಣಲು ಬಲು ಸುಂದರ
ಆಹಾ! ಎಂಥಹ ಸೊಬಗು
ಆಹಾ! ಎಂಥಹ ಸೊಬಗು
ಮುಂಜಾನೆಯ ವೇಳೆಯಲ್ಲಿ
ಆ ಹಕ್ಕಿಗಳ ಚಿಲಿಪಿಲಿಯನ್ನು
ಕೇಳಲು ಬಹಳ ಮಧುರ
ಕೇಳಲು ಬಹಳ ಮಧುರ
ಆ ತಂಪಾದ ಗಾಳಿ ಬೀಸುವಾಗ
ನಮ್ಮೆಲ್ಲರ ಮನಸ್ಸು
ಸತೋಷದಿಂದ ಕುಣಿದಾಡುವುದು
ಸಂತೋಷದಿಂದ ಕುಣಿದಾಡುವುದು
ಮುಂಜಾನೆಯ ಹೊತ್ತಿನಲ್ಲಿ
ಆ ಬೆಟ್ಟಗಳ ನಡುವಿನಲ್ಲಿ
ಉದಯಿಸುತಿರುವನು ಆ ಸೂರ್ಯ
ಉದಯಿಸುತಿರುವನು ಆ ಸೂರ್ಯ

# ಆನೆಯ ಸಹಾಯ

ಒಂದು ದಿನ ಮೊಲಗಳು ಒಟ್ಟಿಗೆ ಆಟವಾಡುತ್ತಿದ್ದವು.ಅವುಗಳು ತುಂಬಾ ಸಂತೋಷ ದಲ್ಲಿದ್ದವು.ಅವರುಹಾಡಿಯೂ,ಕುಣಿದೂಆಟವಾಡುತ್ತಿದ್ದವು.ಹುಲಿಯೊಂದುಪೊದರಿನಹಿಂದಿನಿಂದ ಇದನ್ನೆಲ್ಲನೋಡುತ್ತಿತ್ತು.ಹುಲಿಗೆಇದನ್ನುಕಂಡುನನಗೆಇವತ್ತಿಗೆಆಹಾರವಾಯಿತು.ಎಂದುಸಂತೋಷಪಟ್ಟಿತು.ಹುಲಿಪೊದೆನಿಂದಹೊರಗೆ ಹಾರಿ ತು.ಮೊಲಗಳು ಹುಲಿಯ ನ್ನು ನೋಡಿತು.ಅವುಗಳು ಸಾಧ್ಯವಾದಷ್ಟು ವೇಗದಲ್ಲಿ ಓಡಿದವು.ಹುಲಿಮೊಲಗಳನ್ನು ವೇಗವಾಗಿ ಓಡಿಸಿತು.ಮೊಲಗಳು ಅವುಗಳಿಂದಾಗುವಷ್ಟು ವೇಗದಲ್ಲಿ ಓಡಿದವು.ಓಡಿ ಓಡಿ ಮೊಲಗಳು ಒಂದು ನದಿಯ ಬದಿಯನ್ನು ತಲುಪಿದವು.ದೊಡ್ಡ ಆನೆಯೊಂದು ಅಲ್ಲಿತ್ತು.ಆನೆ ಅದರ ಸೊಂಡಿಲನ್ನು ಹೊರ ಹಾಕಿತು.ಮೊಲಗಳು ಸೊಂಡಿಲಿಗೆ ಹಾರಿದವು.ಅವು ಆನೆಯ ಬೆನ್ನಿಗೆ ಹತ್ತಿ ಅದರ ಬಾಲದಿಂದ ನದಿಯ ಈಚೆ ಬದಿಗೆ ಇಳಿದವು.ಆನೆಯು ತನ್ನ ಸೊಂಡಿಲಿನಲ್ಲಿ ನೀರು ತುಂಬಿಸಿ ನೀರನ್ನು ಹುಲಿಯ ಮೇಲೆ ಎರಚಿತು.ಆ ನೀರು ಹುಲಿಯ ಕಣ್ಣಿಗೆ, ಬಾಯಿಗೆ ಮತ್ತು ಕಿವಿಗೆ ಹೋಯಿತು.ಆನೆ ಮತ್ತೆ ಮತ್ತೆ ನೀರನ್ನು ಎರಚಿತು.ಹುಲಿ ಕೆಳಗೆ ಬಿದ್ದಿತು.ಇದನ್ನು ಕಂಡ ಮೊಲಗಳು ಚಪ್ಪಾಳೆ ತಟ್ಟಿನಕ್ಕರು.ಆನೆಗೆಧನ್ಯವಾದಗಳನ್ನುಹೇಳಿದವು.



# ನನ್ನ ಪ್ರವಾಸದ ಅನುಭವ

ನಾನು ಇತ್ತೀಚೆಗೆ ಕರ್ನಾಟಕದ ಪ್ರಸಿದ್ಧ ದೇವಸ್ಥಾನಗಳಲ್ಲೊಂದಾದ ಗೋಕರ್ಣಕ್ಕೆ ಪ್ರವಾಸ ಹೋಗಿದ್ದೆ. ಈ ಪ್ರವಾಸವು ದೇವಸ್ಥಾನದ ವತಿಯಿಂದ ಆಗಿತ್ತು. ನಾವು 26/1/23 ರಂದು ರಾತ್ರಿ 10 ಗಂಟೆಗೆ ಬಸ್ಸು ಬರುವಲ್ಲಿ ನಿಂತಿದ್ದೆವು. 10:30 ಆಗುವಾಗ ಬಸ್ಸು ಬಂದೇ ಬಿಟ್ಟಿತು. ಈ ಬಸ್ಸು ತಲಪಾಡಿ ಚೆಕ್ ಪೋಸ್ಟ್ ನವರಿಗೆ ಮಾತ್ರ, ಅಲ್ಲಿಂದ ಬೇರೆ ಬಸ್ಸು. ನಾವು ಬೇಗನೆ ತಲುಪಡಿಗೆ ತಲುಪಿ ಇನ್ನೊಂದು ಬಸ್ಸಿಗೆ ಹತ್ತಿದೆವು ಈ ಬಸ್ಸು ನಾನು ಜೀವನದಲ್ಲಿ ಹೋದ ದಿ ಬೆಸ್ಟ್ ಬಸ್ಸು ಆಗಿತ್ತು. ತಲಪ್ಪಾಡಿಯಿಂದ ಅತಿ ದೂರದ ಪ್ರಯಾಣವಾಗಿತ್ತು ಮೂರು ಗಂಟೆ ಬೆಳಿಗ್ಗೆ ಆಗುವಾಗ ಒಂದು ಸ್ಥಳದಲ್ಲಿ ನಿಲ್ಲಿಸಿದರು. ಅಲ್ಲಿ ಇಳಿದು ಚಹಾ ಕುಡಿದಾಗ ಮನಸ್ಸಿಗೆ ಒಂದು ತೃಪ್ತಿ, ಅಂತಹ ದೇಹವನ್ನು ನಡುಗಿಸುವ ಚಳಿಯಲ್ಲಿ ಚಾ ಕುಡಿಯಲು ಒಂದು ಬೇರೆ ಮಜಾ. ಅಲ್ಲಿಂದ ಬೆಳಿಗ್ಗೆ 5:00 ಗಂಟೆ ಆಗುವಾಗ ನಾವು ಸಿಗಂದೂರಿಗೆ ತಲುಪಿದೆವು ಅಲ್ಲಿ ನಾವು ಸಿಗಂದೂರು ಚೌಡೇಶ್ವರಿ ದೇವಸ್ಥಾನಕ್ಕೆ ಹೋದೆವು ಅಲ್ಲಿ ಪ್ರಾರ್ಥನೆ ಮಾಡಿ 7 ಗಂಟೆಗೆ ಚಹಾ ಕುಡಿಯಲು ಹೋದೆವು. ಅಲ್ಲಿ ಚಾ ಇರಲಿಲ್ಲ ಆದರೆ ಅಲ್ಲಿ ಪುಲಾವ್ ಆಗಿತ್ತು ತಿಂಡಿ. ಪುಲಾವ್ ಒಳ್ಳೆ ರುಚಿ ಇತ್ತು. ಉತ್ತರ ಕರ್ನಾಟಕದವರ ತರಕಾರಿ ಮುರಿಯುವ ಶೈಲಿ ವ್ಯತ್ಯಾಸ್ತವಾಗಿತ್ತು. ಅಲ್ಲಿಯ ಚಳಿ ಅಬ್ಬಾ!! 5 ಗಂಟೆಗೆ  ಇಲ್ಲದ ಚಳಿ  7 ಗಂಟೆಗೆ ಪ್ರಾರಂಭವಾಯಿತು. ಆ ಚಳಿ ಎಲ್ಲಾರ ಶರೀರವನ್ನು ನಡಗಿಸಿ  ಬಿಟ್ಟಿತು. ಅಲ್ಲಿಂದ ನಾವು ಇನ್ನೊಂದು ದೇವಸ್ಥಾನಕ್ಕೆ ಹೋದೆವು. ಅಲ್ಲಿ ಹೋಗಿ ನಾವು ಬೇಗ ಬಂದೆವು ಅಲ್ಲಿಂದ ನಾವು ಸಿರಸಿಯ ಮಾರಿಕಾಂಬ ದೇವಸ್ಥಾನಕ್ಕೆ ಹೋದೆವು. ಅಲ್ಲಿ ನಾವು ಪ್ರಸಾದವನ್ನು ತೆಗೆದು ಊಟ ಮಾಡಲು ಹೋದೆವು ಊಟ ಒಳ್ಳೆಯದಿತ್ತು. ಅಲ್ಲಿಂದ ನಾವು ನನಗೆ ಹೋಗಬೇಕು ಎಂದಿದ್ದ ಸ್ಥಳಕ್ಕೆ ಹೋದೆವು ಈ ಸ್ಥಳದ ಬಗ್ಗೆ ನಮ್ಮ ಕನ್ನಡ ಪಾಠದಲ್ಲಿ ಒಂದು ಕವಿತೆಯೇ ಇದೆ. ಇದುವೇ ಜೋಗು ಜಲಪಾತ. ಅಲ್ಲಿ ನಾವು ಹೋದ ಸಮಯದಲ್ಲಿ ಅಷ್ಟಾಗಿ ನೀರು ಹರಿಯುತ್ತಿರಲಿಲ್ಲ, ಆದರೆ ಆ ಪ್ರಕೃತಿಯ ಸೌಂದರ್ಯವನ್ನು ಕಂಡು ಏನೋ ಒಂದು ಖುಷಿ. ಜೋಗು ಜಲಪಾತದಿಂದ ನಾವು ಗೋಕರ್ಣಕ್ಕೆ ಪಯಣವನ್ನು ಬೆಳೆಸಿದೆವು. ನಾವು ಸಂಜೆ 5 ಗಂಟೆ ಆಗುವಾಗ ಗೋಕರ್ಣಕ್ಕೆ ತಲುಪಿದೆವು. ಅಲ್ಲಿ ನಾವು ಶ್ರೀ ಗೋಕರ್ಣ ಗಣಪತಿಯ ದರ್ಶನವನ್ನು ಪಡೆಯಲು ಬಸ್ಸು ದೇವಸ್ಥಾನದ ಹತ್ತಿರ ಹೋಗಲು ಸಾಧ್ಯವಿಲ್ಲದ ಕಾರಣ ನಾವು ರಿಕ್ಷಾದಲ್ಲಿ ಅಲ್ಲಿಗೆ ಹೋಗಿ ಶ್ರೀ ಗೋಕರ್ಣ ಗಣಪತಿಯ ದರ್ಶನವನ್ನು ಪಡೆದೆವು. ಅಲ್ಲಿ ನನಗೆ ಖುಷಿಯಾದ ವಿಚಾರ ಏನೆಂದರೆ ಅಲ್ಲಿ ಹಲವಾರು ವಿದೇಶಿಯರು ಇದ್ದರು, ಅವರು ನಾವು ನಮ್ಮ ಧರ್ಮವನ್ನು ಗೌರವಿಸುವುದಕ್ಕಿಂತ ಹೆಚ್ಚು ಅವರು ಅವರ ಧರ್ಮವನ್ನು ಬಿಟ್ಟು ಬೇರೊಂದು ಧರ್ಮವನ್ನು ಸ್ವೀಕರಿಸಿ ಅದನ್ನು ಗೌರವಿಸುವುದನ್ನು ಕಂಡು ಮನಸ್ಸಿಗೆ ಏನೋ ಒಂದು ಸಂತೋಷ. ಅಲ್ಲಿಂದ ನಾವು ಚಾ ಕುಡಿಯಲು ಹೋಟೆಲ್ ಗೆ ಹೋದೆವು ಅಲ್ಲಿಯ ಗೋಳಿಬಜೆಯು ಇಲ್ಲಿಯ ಗೋಳಿಬಜೆಗಿಂತ ತುಂಬಾ ವ್ಯತ್ಯಾಸವಾಗಿತ್ತು. ಆದರೆ ರುಚಿಯಲ್ಲಿ ಓಕೆ ಎಂದು ಹೇಳಬಹುದು ನನಗೆ ಅದು ಅಷ್ಟು ಇಷ್ಟ ಆಗಲಿಲ್ಲ. ನಮ್ಮೂರಿನ ಗೋಳಿಬಜೆಯಷ್ಟು ಬರಲ್ಲ. ಮತ್ತೆ ನಾವು ಅಲ್ಲಿ ಹತ್ತಿರವಿದ್ದ ಸಮುದ್ರದ ತೀರಕ್ಕೆ ಹೋದೆವು. ಆ ಸೂರ್ಯಾಸ್ತವನ್ನು ಕಂಡು ಹೃದಯಕ್ಕೆ ಶಾಂತಿ ಸಿಕ್ಕಿತು. ನಾವು ಅಲ್ಲಿಂದ 6 ಗಂಟೆ ಆಗುವಾಗ ಹೊರಡಿ 9 ಗಂಟೆ ಆಗುವಾಗ ಒಂದು ಹೋಟೆಲ್ ನಲ್ಲಿ ಫ್ರೈಡ್ ರೈಸ್ ತಿಂದು ಎಲ್ಲಾರು ಬಸ್ಸಿಗೆ ಹತ್ತಿ 1 ಗಂಟೆಗೆ ಮನೆಗೆ ತಲುಪಿದೆವು. ಹೇಳಲು ಹಲವಾರು ವಿಷಯಗಳು ಇನ್ನೂ ಕೂಡ ಇದೆ ಆದರೆ ಇವತ್ತಿಗೆ ಇಷ್ಟು ಸಾಕು. ನನಗೆ ಈ ಪ್ರವಾಸದಿಂದ ಉತ್ತರ ಕರ್ನಾಟಕದ ವೇಷ ಭೂಷಣ,ಆಹಾರ, ಸಂಸ್ಕೃತಿಗಳನ್ನು ನೋಡಿ ಬಹಳ ಸಂತೋಷವಾಯಿತು. ಉತ್ತರ ಕರ್ನಾಟಕದ ಪ್ರಕೃತಿ ಸೌಂದರ್ಯವು ನನ್ನ ಮನಸ್ಸನ್ನೆಳೆಯಿತು. ಜೋಗು ಜಲಪಾತವನ್ನು ಕಂಡು ಬಹಳಷ್ಟು ಖುಷಿಯಾಯಿತು.

SANATH 8B

# ರಾಷ್ಟ್ರದ ಭಾವೈಕ್ಯ

ಒಂದು ರಾಷ್ಟ್ರದಲ್ಲಿ ಹಲವು ತರದ ವೇಷ ಭೂಷಣಗಳು ಹಲವು ತರದ ಜನರು ಹಲವು ತರದ ಸಂಸ್ಕೃತಿಗಳು ಭಿನ್ನಭಿನ್ನ ಭಾಷೆಗಳು ವಿಭಿನ್ನ ಆಚರಣೆಗಳು ವಿವಿಧ ಜಾತಿ ಧರ್ಮಗಳು ಇರುತ್ತದೆ. ಇವುಗಳೆಲ್ಲ ಒಂದು ರಷ್ಟ್ರದ ಪ್ರತ್ಯೇಗತೆಗಳಾಗಿರುತ್ತವೆ.

ಇದೀಗ ಭಾರತದಲ್ಲಿಯೇ ಹಲವಾರು ಸಂಸ್ಕೃತಿಗಳು, ಭಿನ್ನ ಭಿನ್ನದ ಭಾಷೆಗಳು, ವಿಭಿನ್ನ ಆಚರಣೆಗಳೂ, ವಿವಿಧ ಜಾತಿಧರ್ಮಗಳು ಇರುತ್ತವೆ ಆದರೆ ಅವರು ಯಾವತ್ತೂ ಎಲ್ಲಾರೂ ಭಾರತೀಯರೆಂಬ ಏಕತೆಯ ಭಾವವನ್ನು ಕೈಗೊಂಡಿದೆ. ಇದುವೆ ಭಾರತದ ಅತೀ ದೊಡ್ಡ ವಿಶೇಷತೆ. ಭಾರತದಲ್ಲಿ ಎಂದಿಗೂ ಒಗ್ಗಟ್ಟಾಗಿ ಜೀವಿಸುತ್ತಾರೆ

ಯಾವತ್ತೂ ಒಗ್ಗಟ್ಟಿನಿಂದ ಬಾಳಬೇಕು. ಒಗ್ಗಟ್ಟಿನಲ್ಲಿ ಬಲವಿದೆ. ಒಂದು ಕಡ್ಡಿಯನ್ನು ನಮಗೆ ಸುಲಭವಾಗಿ ಭಾಗ ಮಾಡಬಹುದು ಆದರೆ ಒಂದು ಕಡ್ಡಿಯ ಕಟ್ಟವನು ಒಟ್ಟಿಗೆ ಭಾಗ ಮಾಡಲು ಸಾಧ್ಯವಿಲ್ಲ.ಇದಕ್ಕೆ ಕಾರಣ ಒಗ್ಗಟ್ಟಿನಲ್ಲಿ ಬಲವಿದೆ

# ಮುಂಜಾವು

ಅಂಬರದಲ್ಲಿ ತೇಲಾಡುತಿಹನು ಸೂರ್ಯ
ಆಕಾಶಕ್ಕೆ ಕೆಂಪು ಬಣ್ಣವ ನೀಡುತ ತೇಲಾಡುತಿಹನು
ಗುಲಾಬಿ ಗಿಡದಲಿ ಮಂಜಿನ
ಹನಿಯು
ಕಾಮನಬಿಲ್ಲಿನ ರಂಗಿನಲ್ಲಿ
ಸೊಳೆಯಿವುದು
ಸೂರ್ಯನ ಕಾಣುತ ಹೂಗಳು
ಖುಷಿಯಿಂದ ನಲಿಯಿತು



ಮಂಜಿನ ಹನಿಗಳು ತೇಲಾಡುತಿಹಲಿ
ಮನುಷ್ಯನ ಅಂತರಾಳಕ್ಕೆ ತಂಪನು ನೀಡುವುದು
ಮುಂಜಾವಿನ ಹಕ್ಕಿಗಳ ಹಾಡು
ನೀಡುವುದು ಹೃದಯಕೆ ಶಾಂತಿ
ಪ್ರಕೃತಿಗೆ ಹೊಳಪನು ನೀಡುತ
ಸೂರ್ಯನು ಅಂಬರದಲ್ಲಿ
ನಗುತಿಹನು
ಕಂಡರೆ ಈಸುರ ಸುಂದರ ದೃಶ್ಯವ ಒಮ್ಮೆಯು
ಸಾರ್ಥಕ ನಾರಣಯುಷ್ಯ

# ಮಾಂತ್ರಿಕ ಮಣ್ಣಿನ ಕುಡಿಕೆ

ರಾಮಪುರ ಎಂಬ ಒಂದು ಗ್ರಾಮಯಿತ್ತು. ಆ ಊರಿನಲ್ಲಿ ರಾಮು ಎಂಬ ಬಡ ರೈತನು ವಾಸಿಸುತ್ತಿದ್ದ. ಅವನು ಚಿಕ್ಕ ಗುಡಿಸಲಿನಲ್ಲಿ ವಾಸಿಸುತ್ತಿದ್ದ. ಅವನ ಹೆಂಡತಿ ಲಕ್ಷ್ಮಿ ಮತ್ತು ಮಗಳುಜಯಲಕ್ಷ್ಮಿ. ಒಂದು ದಿವಸ ರಾಮು ಅವನ ಮಗಳನ್ನು ಕರೆದುಕೊಂಡು ಪೇಟೆಗೆ ಹೋದನು.ಅಲ್ಲಿ ಒಂದು ದೊಡ್ಡ ಶಾಲೆಯಿತ್ತು. ಅದನ್ನು ನೋಡಿ ಜಯಲಕ್ಷ್ಮಿಗೆ ಶಾಲೆಗೆ ಹೋಗಲುಆಸೆಯಾಗುತ್ತಿತ್ತು.ಆದರೆ ಅವರ ಬಡತನದಿಂದ ಏನು ಮಾಡಲು ಸಾಧ್ಯವಿರಲಿಲ್ಲ. ಒಂದು ದಿವಸ ರಾಮು ಗದ್ದೆ ಅಗೆಯುವಾಗ ಒಂದು ಮಣ್ಣಿನ ಕುಡಿಕೆಯೊಂದು ಸಿಕ್ಕಿತು. ಅದನ್ನು ನೋಡಿ ಆಶ್ಚರ್ಯವಾದನು. ಅದರಲ್ಲಿ ಏನು ಇರಲಿಲ್ಲ. ಅವನು ಮಣ್ಣಿನ ಕುಡಿಕೆಯನ್ನು ಮನೆಗೆ ಕೊಂಡುಹೋದ. ಹಾಗೆ ಅದರಲ್ಲಿ ಹಸುವಿನ ಹಾಲು ಕರೆದನು. ಸ್ವಲ್ಪ ಸಮಯ ನಂತರ ಹಾಲು ಕುಡಿಕೆಯಿಂದ ತುಂಬಿ ಹೊರಗೆ ಚೆಲ್ಲುತ್ತಿತ್ತು. ಅದನ್ನು ನೋಡಿದ ಮಗಳು ಅಪ್ಪನನ್ನು ಕರೆದಳು. ರಾಮುವು ಓಡಿಬಂದು ನೋಡಿದನು. ಅವನಿಗೆ ಮೊದಲಿಗಿಂತಲು ತುಂಬ ಆಶ್ಚರ್ಯವಾಯಿತು. ಅವನು ಹೆಂಡತಿಯನ್ನು ಕರೆದನು. ‘ಇಲ್ಲಿ ನೋಡೆ ಹಾಲು ತುಂಬಿ ಚೆಲ್ಲುತ್ತಿದೆ ‘ ಇದನ್ನು ನೋಡಿದ ಲಕ್ಷ್ಮಿಯು ಓಡಿ ಹೋಗಿ ಪಾತ್ರೆಗಳನ್ನು ತಂದಳು. ಎಲ್ಲಾ ಪಾತ್ರಗಳಲ್ಲಿಯು ಹಾಲು ತುಂಬಿಕೊಂಡಿತು.ಹಾಗೆ ರಾಮುವು ಹಾಲು ವ್ಯಾಪಾರಿಯಾದ. ಮರುದಿನವೇ ಮಗಳನ್ನು ರಾಮು ಶಾಲೆಗೆ ಕಳಿಸಿದನು. ಅದರಿಂದಾಗಿ ಅವನ ಬಡತನವು ಮೆಲ್ಲನೆ ಕರಗಿತು. ಆತ ಕುಟುಂಬವು ಖುಷಿಯಿಂದ ಇತ್ತು. ಇದಕ್ಕೆ ಹೇಳುವುದು. ನಾವು ಎಷ್ಟೇ ಶ್ರಮ ಪಟ್ಟರು ಅದರ ಪ್ರತಿಫಲ ಸಿಕ್ಕೆಸಿಗುತ್ತದೆ.

# ಔಷಧೀಯ ಸಸ್ಯಗಳು

## *ಲ್ಯಾವೆಂಡರ್

ಲ್ಯಾವೆಂಡರ್ ಪರಿಮಳವು ನಿಮ್ಮ ನರಗಳನ್ನುಶಾಂತಗೊಳಿಸಲು ತುಂಬಾ ಒಳ್ಳೆಯದು. ಅದರಪರಿಮಳಗಳ ಜೊತೆಗೆ ನೀವು ಲ್ಯಾವೆಂಡರ್ ಚಹಾವನ್ನು ಬಳಸಬಹುದು. ಅದು ನಿಮಗೆ ರಾತ್ರಿಯಲ್ಲಿ ಉತ್ತಮ ನಿದ್ರೆಯನ್ನು ನೀಡಲು ಸಹಾಯ ಮಾಡುತ್ತದೆ.

## * ಶುಂಠಿ

ಶುಂಠಿಯ ಅನೇಕ ಪ್ರಯೋಜನಗಳನ್ನು ವಾಂತಿ,ಅತಿಸಾರ, ಹೊಟ್ಟೆ ನೋವು,ಹಲ್ಲು ನೋವು ಮತ್ತುಸಂಧಿವಾತಕ್ಕೆ ಚಿಕಿತ್ಸೆ ನೀಡಲು ಬಳಸಲಾಗುತ್ತದೆ.

## ಲಿಂಬೆ

ನಿಮ್ಮ ಮನಸ್ಸಿಗೆ ತೊಂದರೆಯಾಗಿದ್ದರೆ ನಿಮ್ಮ ದೇಹವು ಸರಿಯಾಗಿ ಕಾರ್ಯ ನಿರ್ವಹಿಸುವುದಿಲ್ಲ. ಲಿಂಬೆ ಗಿಡದ ರುಚಿ ತುಂಬಾ ರುಚಿಕರವಾಗಿರುತ್ತದ.ಮತ್ತು ನೀವು ಅದನ್ನು ಐಸ್ ಕ್ರೀಮ್‌ನಂತಹ ವಿಭಿನ್ನ ಭಕ್ಷ್ಯಗಳಲ್ಲಿ ಬಳಸಬಹುದು .

## *ಬೇವು

ಔಷಧೀಯ ಗುಣಗಳನ್ನು ಹೊಂದಿರುವ ಎಣ್ಣೆಯನ್ನು ಹೊರತೆಗೆಯಲು ಬೇವಿನ ಬೀಜಗಳನ್ನು ಬಳಸಲಾಗುತ್ತದೆ ಮತ್ತು ಇದು ಸೌಂದರ್ಯವರ್ಧಕಗಳು ಸಾಬೂನುಗಳ ಕೂದಲಿನ ಎಣ್ಣೆ ಮತ್ತು ಫೇಸ್ ವಾಶ್‌ನ ಮುಖ್ಯ ಭಾಗವಾಗುತ್ತದೆ.

## *ಬೆಳ್ಳುಳ್ಳಿ

ಇದು ನಿಮ್ಮ ದೇಹದಲಿ ಕೊಲೆಸ್ಟ್ರಾಲ್ ಮಟ್ಟವನ್ನು ಕಾಪಾಡುತ್ತದೆ.ಇದರ ಜೊತೆಗೆ ಹೃದಯ ಕಾಯಿಲೆಯಿರಿದ ನಿಮ್ಮನ್ನು ತಡೆಯುತ್ತದೆ, ಇದು ನಿಮ್ಮ ರಕ್ತವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ.

# തെങ്ങ്

ഞാൻ തെങ്ങ് എന്നെ നിങ്ങൾക്ക് പരിജയമുണ്ടല്ലോ കേരളത്തിൽ ധാരാളമായി എന്നെ കാണാം തെങ്ങ് ചേർത്തലെ നിങ്ങൾ പതരംപലഹാരങ്ങളും കറികളും ഉണ്ടാകുന്നത് എന്റെ ഓലകൊണ്ട് നിങ്ങൾക്ക് പലതരം കളിപ്പാട്ടങ്ങൾ ഉണ്ടാകാം വീടുമെയാനും ചൂലും പായയും ഉണ്ടാക്കാനുംഓല ഉപയോഗിക്കുംക്ഷീണംമാറ്റാൻ നിങ്ങൾ ഇളനീർ കഴിക്കുന്നു എനിക്ക് ചില്ലകളിയല്ല എന്റെ എല്ലാ ഭാഗങ്ങളുംവിറകിന്പറ്റും



# വീട്

മനോഹരമായ ഒരു ഗ്രാമ പ്രദേശത്ത് എല്ലാ സൗകര്യങ്ങളും ഉൾകൊള്ളുന്ന അതിമനോഹരമായ ഒരു കുഞ്ഞു വീട് ഉണ്ടായിരുന്നു. ആ വീട്ടിൽ അഞ്ച് പേർ ഉണ്ടായിരുന്നു അച്ഛൻ അമ്മമുത്തശ്ശി മുത്തശ്ശൻ  പിന്നെ ആഅച്ഛനുംഅമ്മയ്ക്കും രണ്ട് മക്കളുണ്ടായിരുന്നു ചിന്നുവും മിന്നുവും വീട് വിശാലമാണെങ്കിലും ആ വീട്ടിൽ സമാദാനമോ സന്തോഷമോ ഉണ്ടായിരുന്നില്ല

# MY BEST FRIEND



A best friend is a person who you
Value above anthor friendsin your life,
Someone you have funwith, someone you trust and someone in whomyou confide.Thefirstperson you call when you get good news or want to go out for a bite to eat is an example of your best friend.

# A Bag Of Oranges

An old woman was walking along the road. She carried a paper bag full of Oranges for her grandchildren. Suddenly she stumbled over a stone and fell down. The Oranges rolled over the road and lay scattered around. A boy who saw this came running. Helpings the woman get up, he asked 'are you okay?' 'I'm alright, child. But my oranges...., she said 'Don't worry. I shall pick them up for you.' the boy said. He picked up the scattered oranges. Putting them into her bag he handed it over her . Taking an orange from the bag, the old woman said smiling, 'Have this, my child.' The boy too smiled and took the orange from her.

# സോഷ്യൽ മീഡിയ

സോഷ്യൽ മീഡിയയുടെ നാം സൂക്ഷിക്കണം പുതിയ കാലത്ത് നമ്മുടെ നിത്യ ജീവിതത്തിൽ സോഷ്യൽ മീഡിയയുടെ സ്ഥാനം അതിപ്രധാനമാണ് വിദ്യാഭ്യാസംതൊഴിൽ സാമ്പത്തികം സൗഹൃദംതുടങ്ങിയ വിവിധ മേഖലകളിൽ സാമൂഹ്യമാധ്യമങ്ങൾ പ്രത്യക്ഷ്മായും നമ്മുടെ ജീവിതത്തിൽ ഇടപെടുന്നുണ്ട് ആഗമനത്തോടെ ഈ ഉപയോഗം പൂർവോപരി വർധികുകയും നമ്മുടെ നിത്യ ജീവിതത്തിലെ ഒരി അനിവാര്യ ഘടകമയി മാറുകയും ചെയ്തിട്ടുണ്ട് 2024ലെ കണക്കുകൾ പ്രകാരം ലോകത്ത് ഇന്ന് 474മില്യൺ ജനങ്ങൾ സോഷ്യൽ മീഡിയ ഉപയോക്താക്കളാണ് അഥവാ ലോകജനസംഖ്യയുടെ 593 പേരും വിത്യസ്ത സോഷ്യൽ മീഡിയ പ്ലേറ്ഫൊർമ്മുകളിൽ ഇടപെടുന്നവരാണ് കഴിഞ്ഞ ഒരു വർഷത്തിൽ മാത്ര ം 190 മില്യൺ ഉപയോക്തകൾ സോഷ്യൽ മീഡിയയിൽ പുതിയ അംഗങ്ങളായി ചേർന്നുവെന്നത് മനസിലാക്കിതരുന്നുണ്ട് സാമൂഹ്യമാധ്യമങ്ങളുടെ ഉപയോഗത്തിൽ ചിലത് ശ്രദ്ധികേണ്ടതുണ്ട് നമ്മുടെ ജീവിത രീതികളും പെരുമാറ്റങ്ങളും അനുകരിച്ച് ആ രൂപത്തിൽ ജീവിതം ചിട്ടപ്പെടുത്തുന്ന കുട്ടികളെ കുറിച് നല്ല ബോധ്യവും തിരിച്ചറിവും നാമുകനിവാര്യമാണ് സോഷ്യൽ മീഡിയ അമിതമായ ഉപയോഗതിലുണ്ടാകുന്ന പ്രശ്നങ്ങളും അവ വരുത്തി വെക്കുന്ന വിനകളും മനസിലാകിയിരികണം സാമൂഹ്യ മാധ്യമങ്ങളുടെ ഉപയോഗത്തിലൂടെ നമുക്ക് നഷ്ട്ടപെടവുന്ന ചില മൂല്യങ്ങളെ കുറിച്ചും ആ മുല്യങ്ങൾ എങ്ങനെയെല്ലം സ്വാധിനിക്കുമെന്നാതിനെ കുറിച്ചും മനസിലാക്കിയിരിക്കണം മറ്റുള്ളവർ അവരുടെ സോഷ്യൽ മീഡിയ പ്ലേറ്ഫോമുകളിലൂടെ പുറത്തു വിടുന്നത് അവരുടെ യഥാർത്ഥ ജീവിതമാണെന്ന് ധരിക്കരുത് അത് അവര്നുഭവിക്കുന്ന പ്രശ്നങ്ങളും വെല്ലുവിളികളും മറച്ചു വെച്ച് കൃതിമാമായി ആവിഷകരിക്കുന്നതവം അത് കൊണ്ട് നമ്മുടെ കുട്ടികളെ നമ്മുടെ ജീവിത സാഹചര്യങ്ങൾ തിരിച്ചറിഞ്ഞ് അതിൽ സന്തോഷം കണ്ടത്തി വിലയിരത്തുകയാണ് വേണ്ടത്

# ನನ್ನ ಬೆಕ್ಕು

ನನ್ನ ಮನೆಯಲ್ಲೊಂದು ಬೆಕ್ಕಿದೆ.ಅದಕ್ಕೆನಾನು ಮಿಟ್ಟು' ಎಂಬ ಹೆಸರಿಟ್ಟೇನು. ನಾನು ನನ್ನ ಬೆಕ್ಕನ್ನುಇಷ್ಟಪಡುತ್ತೇನೆ. ಅದೇ ರೀತಿ ನನ್ನ ಮಿಟ್ಟು ನನ್ನನ್ನುಇಷ್ಟಪಡುತ್ತದೆ.ನಾನುಒಬ್ಬಂಟಿಯಾಗಿದ್ದಾಗ ಮಿಟ್ಟು ನನ್ನ ಜೊತೆಯಲ್ಲಿ ರುತ್ತದೆ. ನಾನು ಅದನ್ನು ಮಿಟ್ಟು ಎಂದು ಕರೆಯುವಾಗ ಅದು ಎಲ್ಲಿದ್ದರೂ ಓಡಿ ಬರುತ್ತದೆ. ನನ್ನ ಮಿಟ್ಟು ವಿನೊಂದಿಗೆ ಸಮಯ ಕಳೆಯುವುದೆಂದರೆ ನನಗೆ ತುಂಬಾ ಇಷ್ಟ. ನಾನು ಅದರೊಂದಿಗೆ ಆಟವಾಡುದೆಂದರೆ ಅದಕ್ಕೂ ಇಷ್ಟ.ನನ್ನ ಮಿಟ್ಟು ಹೇಗಿದೆ ಎಂದರೆ ಬಿಳಿ ಬಣ್ಣದ ರೋಮಗಳು ಕಂದು ಬಣ್ಣದ ಬಾಲ ಹಾಗೂ ನೀಲ ಕಣ್ಣುಗಳುಳ್ಳ ಸುಂದರಿ. ನಾನು ಮಿಟ್ಟುವಿಗೆ ಕಪ್ಪು ಬೊಟ್ಟನ್ನು ಹಾಕಿದ್ದೇನೆ. ಅದು ನಮ್ಮ ಮನೆ ಬಿಟ್ಟು ಎಲ್ಲಿಗೂ ಹೋಗುವುದಿಲ್ಲ. ನಾನು ಶಾಲೆಯಿಂದ ಬರುವುದನ್ನು ಕಂಡರೆ ಅದು ಓಡೋಡಿ ಬರುತ್ತದೆ.ಅದರ ಫುಡ್ಡನ್ನು ಹಾಕಿದ ಡಬ್ಬವನ್ನು ಕುಳುಕಿಸುವ ಶಬ್ದ ಕೇಳಿದರೆ ಅದು ಓಡೋಡಿ ಬರುತ್ತದೆ. ನಾನು ಅದಕ್ಕೆ ಚಿಕ್ಕ ಚಿಕ್ಕ ಉಡುಪುಗಳನ್ನು ಹೊಲಿದು ಹಾಕುತ್ತೇನೆ. ನಾನು ನನ್ನ ಮುದ್ದಿನ ಮಿಟ್ಟುವಿನೊಂದಿಗೆ ಹೆಚ್ಚು ಸಮಯ ಕಳೆದುಕೊಳ್ಳಲು ಇಷ್ಟಪಡುತ್ತೇನೆ.

